ಕರ್ನಾಟಕ ಸರ್ಕಾರ

ಸಂ:ಗ್ರಾಅಪ 74 ಗ್ರಾನೀಸ(4)2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12.08.2014.

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**
**1.** ಮುಖ್ಯ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ,
ಆನಂದರಾವ್ ವೃತ್ತ, **ಬೆಂಗಳೂರು-09.**

**2.** ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೆ,

ವಿಷಯ: **2014-15ನೇ** ಸಾಲಿನ ತುರ್ತು ಕುಡಿಯುವ ನೀರಿನ ಕ್ರಿಯಾ ಯೋಜನೆಯನ್ನು ತಯಾರಿಸುವ ಬಗ್ಗೆ.

ಉಲ್ಲೇಖ: 1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:No.Q-14018/54(Drought.)/2014.DWS(Stat), ದಿನಾಂಕ:14.07.2014.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 68 ಗ್ರಾನೀಸ(4)2014, ದಿನಾಂಕ:26.4.2014.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 27 ಗ್ರಾನೀಸ(4) 2014, ದಿನಾಂಕ:07.05.2014.

-

ಉಲ್ಲೇಖ (1)ರ ಕೇಂದ್ರ ಸರ್ಕಾರದ ಪತ್ರದಲ್ಲಿ **2014-15ನೇ** ಸಾಲಿನ ಜಿಲ್ಲಾವಾರು ತುರ್ತು ಕ್ರಿಯಾ ಯೋಜನೆಯನ್ನು ಸಲ್ಲಿಸಲು ತಿಳಿಸಿದೆ. ತುರ್ತು ಕುಡಿಯುವ ನೀರಿನ ಸಂಬಂಧ ಅನುಷ್ಠಾನಗೊಳಿಸಿರುವ / ಅನುಷ್ಠಾನಗೊಳಿಸಬೇಕಾದ ಕಾಮಗಾರಿಗಳ ಬಿಲ್ಲುಗಳನ್ನು ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ಬಿಡುಗಡೆಯಾಗಿರುವ **ರೂ.100ಕೋಟಿ** ಅನುದಾನದಡಿಯಲ್ಲಿ ಪಾವತಿಸಲು ತಿಳಿಸಲಾಗಿದ್ದು, ಉಳಿದ ಕಾಮಗಾರಿಗಳನ್ನು ಚಾಲ್ತಿ ಮಾರ್ಗಸೂಚಿಗಳನ್ವಯ ಪರಿಶೀಲಿಸಿ, **2014-15ನೇ** ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ಅಳವಡಿಸಲು ತಿಳಿಸಲಾಗಿತ್ತು. ಇಷ್ಟಾದರೂ ಇನ್ನೂ ಕುಡಿಯುವ ನೀರಿನ ಸಮಸ್ಯೆಯಿರುವ ಜನವಸತಿಗಳಲ್ಲಿ ಅನುಷ್ಠಾನಗೊಳಿಸಬೇಕಾದ ಕಾಮಗಾರಿಗಳ ಕುರಿತು ಜನವಸತಿವಾರು / ಕಾಮಗಾರಿವಾರು ಪಟ್ಟಿಯನ್ನು ಸಿದ್ಧಪಡಿಸಿ, ಅದಕ್ಕೆ ಅಗತ್ಯವಿರುವ ವಾಸ್ತವಿಕ ಅನುದಾನದ ಬೇಡಿಕೆಯನ್ನು **CE/PRED** ಮುಖೇನ ಕಳುಹಿಸಬೇಕು. ಈ ರೀತಿ ಪ್ರಸ್ತಾವನೆ ಕಳುಹಿಸುವಾಗ ವಾಸ್ತವಿಕವಾಗಿ ತೊಂದರೆಗೊಳಗಾಗಿರುವ / ತೊಂದರೆಗೊಳಗಾಗಬಹುದಾದ

ಜನವಸತಿಗಳನ್ನು ಗಮನದಲ್ಲಿಟ್ಟುಕೊಂಡು, ಜಿಲ್ಲಾಧಿಕಾರಿಗಳ ವತಿಯಿಂದ ಲಭ್ಯವಾಗುವ ಅನುದಾನವನ್ನು ಕಳೆದು ಉಳಿದ ಬಾಬ್ತಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಬೇಕಾದ ಅನುದಾನ ವಿವರಗಳನ್ನು ಉಲ್ಲೇಖ (3)ರಲ್ಲಿನ ಸರ್ಕಾರದ ಸುತ್ತೋಲೆಗಳಲ್ಲಿನ ನಿರ್ದೇಶನಗಳನ್ವಯ, ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆ–1 ಮತ್ತು 2ರಲ್ಲಿ **CE/PRED** ಮುಖೇನ ಸರ್ಕಾರಕ್ಕೆ ಕಳುಹಿಸಬೇಕು. ಸದರಿ ಜಿಲ್ಲಾವಾರು ತುರ್ತು ಕ್ರಿಯಾ ಯೋಜನೆಗಳನ್ನು **CE/PRED** ರವರು ಪರಿಶೀಲಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ **ದಿನಾಂಕ:31.08.2014ರೊಳಗೆ** ಕಳುಹಿಸಬೇಕೆಂದು ಕೋರಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಇ–ಮೇಲ್:rk3452000gmail.com
ಫೋನ್:22032806, ಫ್ಯಾಕ್ಸ್:22203175

**ಪ್ರತಿಯನ್ನು:**

1. ರಾಜ್ಯದ ಎಲ್ಲಾ (8) ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರುರವರುಗಳ ಮಾಹಿತಿಗಾಗಿ ಮತ್ತು ಮುಂದಿನ ಜರೂರು ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
2. ರಾಜ್ಯದ ಎಲ್ಲಾ (38) ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ರವರುಗಳ ಮಾಹಿತಿ ಮುಂದಿನ ಅಗತ್ಯ ಜರೂರು ಕ್ರಮಕ್ಕಾಗಿ ಕಳುಹಿಸಿದೆ.

LD

# ನಮೂನೆ–1

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಒಟ್ಟು ಜನವಸತಿಗಳ ಸಂಖ್ಯೆ | ಪ್ರಸ್ತಾಪಿಸಿರುವ ತುರ್ತು ಕಾಮಗಾರಿ ವಿವರ ಮತ್ತು ಅಂದಾಜು ಮೊತ್ತ | | | | | | | | | | ಒಟ್ಟು ಬೇಡಿಕೆ ಮೊತ್ತ | SDRF / NDRFನಡಿ ಲಭ್ಯವಿರುವ ಅನುದಾನದ ಮೊತ್ತ | ಈಗಾಗಲೇ TFC ಶಿಫಾರಸ್ ಆಧರಿಸಿ ಅನುಮೋದಿತ ಕಾಮಗಾರಿ ಅನುಷ್ಠಾನವಾಗಿದ್ದರೂ ಬಿಲ್ ಪಾವತಿಗಾಗಿ ಬಾಕಿಯಿರುವ ಮೊತ್ತ | RDPRನಿಂದ ಬಿಡುಗಡೆ ಮಾಡಬೇಕಾದ ಅನುದಾನ ಮೊತ್ತ |
|---|---|---|---|---|---|---|---|---|---|---|---|---|---|---|---|---|---|
| | | | | Revival of PWS | | Revival of MWS | | Retrieval / Hydro fracturing | | Drilling of New Bore well | | Energisation | | | | | |
| | | | | Nos | Approx cost | Nos | Approx cost | Nos | Approx cost | Nos | Approx cost | Nos | Approx cost | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |

ಜಿಲ್ಲಾಧಿಕಾರಿಗಳು
...........................ಜಿಲ್ಲೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
...............ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರು
.............ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ

# ನಮೂನೆ–2

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯಿತಿ | ಸಮಸ್ಯಾತ್ಮಕ ಜನವಸತಿ ಹೆಸರು | Coverage Status as on 01.04.2014 | ಪ್ರಸ್ತಾಪಿಸಿರುವ ತುರ್ತು ಕಾಮಗಾರಿ ವಿವರ ಮತ್ತು ಅಂದಾಜು ಮೊತ್ತ | | | | | ಒಟ್ಟು ಬೇಡಿಕೆ ಮೊತ್ತ | SDRF / NDRFನಡಿ ಲಭ್ಯವಿರುವ ಅನುದಾನದ ಮೊತ್ತ | ಈಗಾಗಲೇ TFC ಶಿಫಾರಸ್ ಆಧರಿಸಿ ಅನುಮೋದಿತ ಕಾಮಗಾರಿ ಅನುಷ್ಠಾನವಾಗಿದ್ದರೂ ಬಿಲ್ ಪಾವತಿಗಾಗಿ ಬಾಕಿಯಿರುವ ಮೊತ್ತ | RDPRನಿಂದ ಬಿಡುಗಡೆ ಮಾಡಬೇಕಾದ ಅನುದಾನ ಮೊತ್ತ | ಏಕೆ 2014–15ನೇ ಸಾಲಿನ AAPನಲ್ಲಿ ಅಳವಡಿಸಿಲ್ಲ |
|---|---|---|---|---|---|---|---|---|---|---|---|---|---|---|---|
| | | | | | | Revival of PWS<br>Approx cost | Revival of MWS<br>Approx cost | Retrieval / Hydro fracturing<br>Approx cost | Drilling of New Bore well<br>Approx cost | Energisation<br>Approx cost | | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |

ಜಿಲ್ಲಾಧಿಕಾರಿಗಳು
............................ಜಿಲ್ಲೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
................ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರು
.............ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ

ವಿ. ಸೂ: ಜನವಸತಿಗಳಲ್ಲಿ ದಿನಾಂಕ:01.04.2014ರ YDUನಲ್ಲಿ 100% Coverage ಅಡಿಯಲ್ಲಿದ್ದು, ನಂತರದ ದಿನಗಳಲ್ಲಿ ಜಲಮೂಲ ಬತ್ತಿಹೋಗಿದ್ದಲ್ಲಿ / ಕಡಿಮೆಯಾಗಿದ್ದಲ್ಲಿ, ಅಂತಹ ಜನವಸತಿಗಳನ್ನು ತುರ್ತು ಕ್ರಿಯಾ ಯೋಜನೆಯಡಿಯಲ್ಲಿ ಅಳವಡಿಸಿದ್ದಲ್ಲಿ ಸ್ಪಷ್ಟವಾಗಿ ಷರಾದಲ್ಲಿ ನಮೂದಿಸತಕ್ಕದು.